ವಸು ಮತ್ತು ಕೃಷ್ಣರಾಯರು ತಮ್ಮ ನಂಬಿಕೆಗಳ ಸಮರ್ಥನೆಯಲ್ಲಿ ಮಾಡುವ ಜಗಳಗಳು. ಈ ಭಾಗಗಳಲ್ಲಿ ಚರ್ಚೆಗಳು ಆತ್ಮೀಯ ವೈಯಕ್ತಿಕ ಸಂಬಂಧಗಳ ಭಿತ್ತಿಯ ಮೇಲೆ ಬೇರೆಯೇ ಆದ ಸ್ವರೂಪವನ್ನು ಪಡೆಯುತ್ತವೆ. ಇದಕ್ಕೂ ಮುಖ್ಯವೆಂದರೆ, ಸಮುದಾಯದ ಇತರರು ಯೋಜನೆಯ ಪರಿಣಾಮಗಳಿಗೆ ಪ್ರತಿಕ್ರಿಯಿಸುವ ರೀತಿ. ಸೇತುವೆಗಳು, ರಸ್ತೆಗಳು, ಬಸ್ಸುಗಳು ಬಂದ ಮೇಲೆ ದೋಣಿ ಗಣಪ, ತಾನು ಇನ್ನು ಈ ಸಮುದಾಯಕ್ಕೆ ಬೇಡವಾಗಿದ್ದೇನೆ ಎನ್ನುವ ವಿಷಾದದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆದರೆ, ದತ್ತಪ್ಪನವರ ಮಗ ಗಣೇಶನೂ ಸೇರಿದಂತೆ ಅನೇಕರಿಗೆ ಬದಲಾದ ಪರಿಸ್ಥಿತಿಗಳ ಪ್ರಯೋಜನ ಪಡೆಯುವುದು ಮುಖ್ಯವಾಗುತ್ತಿದೆ.

ಭಾರಂಗಿ ಮನೆಯ ವಾಸ್ತು ಬಾಗಿಲನ್ನು ಕೀಳಿಸಿ ತೆಗೆದುಕೊಂಡು ಹೋಗುವ ಮಗ ಗಣೇಶನಿಗೆ ಅದು ಒಂದು ಬಾಗಿಲು ಮಾತ್ರ. ಹಳೆ ತಲೆಮಾರಿನ ನಂಬಿಕೆಗಳು, ಐತಿಹ್ಯಗಳು, ಪುರಾಣಗಳು ಆಧುನಿಕತೆಯ utilitarian ಮನೋಭಾವದ ಏಟಿನಲ್ಲಿ ಅರ್ಥಹೀನವಾಗಿ ಕಾಣತೊಡಗುತ್ತವೆ. ಕಾದಂಬರಿಯ ಬಹುಮುಖ್ಯ ಕಾಳಜಿಯೆಂದರೆ, ಈ ಮನ್ವಂತರದಲ್ಲಿ 'ಹಳೆಯ ದೇವರುಗಳು ಸತ್ತು' (ಅಡಿಗರ ಪ್ರತಿಮೆ), ಹಳೆಯ ಮೌಲ್ಯಗಳು ಅರ್ಥಹೀನವಾಗಿ ಅವುಗಳ ಜಾಗದಲ್ಲಿ ಈಗೇನು ಬಂದಿದೆ? ಸ್ವಾರ್ಥ, ಲಾಭ, ಪ್ರಯೋಜನ, ಸುಲಭ ಶ್ರೀಮಂತಿಕೆ ಮತ್ತು ಕೊಳ್ಳುಬಾಕುತನ. ಲೇಖಕರು ಹೀಗೆ ಆಗುವುದಕ್ಕೆ ತಂತ್ರಜ್ಞಾನ, ಯೋಜನೆಗಳನ್ನು ದೂಷಿಸುವುದಿಲ್ಲ. ಅವುಗಳು ತೆರೆದಿಡುವ ಅವಕಾಶಗಳನ್ನು ಸಮುದಾಯ ಹೇಗೆ ಬಳಸಿಕೊಂಡು ತನ್ನ ಅವನತಿಯನ್ನು ತಲುಪುತ್ತದೆ ಎನ್ನುವುದರ ವಿಷಾದಪೂರ್ಣ ಚಿಂತನೆ ಕಾದಂಬರಿಯ ಕೊನೆಯ ಭಾಗಗಳನ್ನು ರೂಪಿಸಿದೆ. ಇಷ್ಟು ತ್ವರಿತವಾಗಿ ಸಮುದಾಯದ ಮೌಲ್ಯಗಳು ಅವನತಿಗೊಳ್ಳುವುದಾದರೆ, ಮೂಲತಃ ಅವು ಗಟ್ಟಿಯಾಗಿದ್ದವೆ? ಎನ್ನುವ ತಾತ್ವಿಕ ಪ್ರಶ್ನೆಯೂ ಇಲ್ಲಿದೆ. ಅಥವಾ ಆರ್ಥಿಕ ಮೂಲರಚನೆಗಳಲ್ಲಿ ಆಳವಾದ, ಸಮಗ್ರವಾದ ಬದಲಾವಣೆಗಳು ಉಂಟಾದಾಗ ಮನುಷ್ಯ ಸ್ವಭಾವ, ನಡವಳಿಕೆ ಇವುಗಳೂ ಮೂಲಭೂತ ಬದಲಾವಣೆ ಹೊಂದುತ್ತವೆ ಎನ್ನುವ ವಸ್ತುನಿಷ್ಠ ತಿಳಿವಳಿಕೆ ಇಲ್ಲಿದೆ ಎನ್ನಬಹುದು. ದೂರಾನ್ವಯ ಎಂದು ಅನ್ನಿಸಿದರೂ ಕಾರ್ಲ್ ಮಾರ್ಕ್ಸ್ ಹೇಳಿದ್ದು ಇದನ್ನೇ. ಜಮೀನ್ದಾರಿ ಸಮಾಜವನ್ನು ನಿರ್ದಯವಾಗಿ ನಾಶಮಾಡಿ ಅಧಿಕಾರಕ್ಕೆ ಬರುವ ಬಂಡವಾಳಶಾಹಿ ಇಂಥ ಕೆಲಸವನ್ನೇ ಮಾಡುತ್ತದೆ ಎಂದು ಅವನ ವಾದ. 'All that is solid melts into thin air' ಎನ್ನುವ ಶೇಕ್ಸ್‌ಪಿಯರ್ ಬರೆದ ಸಾಲನ್ನು ಬಳಸಿ ಮಾರ್ಕ್ಸ್ ಇದನ್ನು ವಿವರಿಸುತ್ತಾನೆ. 'ಪುನರ್ವಸು' ಕಾದಂಬರಿಯಲ್ಲಿಯೂ ಆಗುವುದು ಇದೇ. ದತ್ತಪ್ಪ, ತುಂಗಕ್ಕಯ್ಯನವರನ್ನು ಸೃಷ್ಟಿಸಿದ ಹಳೆಯ ಜಗತ್ತು ಅದೆಷ್ಟು ಗಟ್ಟಿಯಾಗಿತ್ತು? ಆದರೀಗ ಅದು ಗಾಳಿಯಲ್ಲಿ ಕರಗಿ ಹೋಗಲೇಬೇಕು. ಹೀಗಾಗಿ ಕಾದಂಬರಿಯ ಕೊನೆಗೆ ತುಂಗಕ್ಕಯ್ಯ ಇಚ್ಛಾ ಮರಣಹೊಂದಿದರೆ, ದತ್ತಪ್ಪ ಹೆಗಡೆ ಅದೃಶ್ಯರಾಗುವುದು ಚಾರಿತ್ರಿಕ ಅನಿವಾರ್ಯತೆಯೂ ಹೌದು. ಅವರೊಂದಿಗೆ ಒಂದು ಸಮುದಾಯ, ಒಂದು ಜೀವನಕ್ರಮ ಕೊನೆಗೊಳ್ಳುತ್ತದೆ. ಅವುಗಳ ಬದಲಿಗೆ ಅನುಷ್ಠಾನಕ್ಕೆ ಬರುತ್ತಿರುವ ಹೊಸ ಜಗತ್ತಿನ ಬಗ್ಗೆ ಬರಹಗಾರರಿಗೆ ಗಾಢವಾದ ಅನುಮಾನಗಳಿವೆ. ಈ ಎಲ್ಲಾ ವಿದ್ಯಮಾನಗಳನ್ನು ಅವಧೂತನಂತೆ, ಪ್ರವಾದಿಯಂತೆ ಮುಂಗಂಡು ಕಣಿಯ ಶೈಲಿಯಲ್ಲಿ ಹೇಳುವ ಮುರಾರಿ ಭಟ್ಟ ಈ ಕಾದಂಬರಿಯ ಅಪೂರ್ವವಾದ ಪಾತ್ರ. 'ಕದಡಿದ ನೀರು' ನಾಟಕದ ಹುಚ್ಚ ರಾಚಪ್ಪನಂತಿರುವ ಮುರಾರಿ ಭಟ್ಟ ಎಲ್ಲರಿಗಿಂತ ಮೊದಲು ಬರಲಿರುವ ಪ್ರಳಯವನ್ನು ಕಾಣುತ್ತಾನೆ. ಸಮುದಾಯವನ್ನು ಎಚ್ಚರಿಸುತ್ತಾನೆ. ಅವನು ಗ್ರೀಕ್ ನಾಟಕ, ಪುರಾಣಗಳ Cassandraನಂಥ ದುರ್ದೈವಿ, ಅವಳಿಗಿರುವ ಶಾಪವೆಂದರೆ ಅವಳು ಆಗಬಹುದಾದದನ್ನು ಸತ್ಯವಾಗಿ ಹೇಳುತ್ತಾಳೆ. ಆದರೆ, ಯಾರೂ ನಂಬುವುದಿಲ್ಲ. ಮುರಾರಿ ಭಟ್ಟರ ಮೇಲಿರುವ ಶಾಪವೂ ಅದೇ. ಜೊತೆಗೆ ಆತ ಎಲ್ಲಾ ಅನ್ಯಾಯಗಳನ್ನು ವಿರೋಧಿಸುವ ಪ್ರತಿರೋಧದ ಮೂಲ ಮಾದರಿ.

ಪ್ರಭುತ್ವದ ಅಧಿಕಾರವೆಂದರೆ ಅದು ನೇರವಾದ ಹಿಂಸೆ, ಒತ್ತಾಯ, ಶಿಕ್ಷೆ ಇವುಗಳ ಮೂಲಕ ಅಂದರೆ ಕಣ್ಣಿಗೆ ರಾಚುವಂತೆ ಕಾಣುವ ಅಧಿಕಾರವೆಂದು ನಾವು ತಪ್ಪಾಗಿ ಭಾವಿಸುತ್ತೇವೆ. ಈ ಕಾದಂಬರಿಯು ಈ ಅಪಕ್ವ ತಿಳಿವಳಿಕೆಯನ್ನು ನಿರಚನಗೊಳಿಸುತ್ತದೆ. ದೂರದ ಮೈಸೂರಿನಲ್ಲಿ ಪ್ರಭುಗಳು, ಅಧಿಕಾರಿಗಳು,